


ಪ್ರಯತ್ನಿಸುವುದು? ಹೊಸವರ್ಷದ ಹೊಸ್ತಿಲಲ್ಲಿ ಈ ಕುರಿತ ಆತ್ಮಾವಲೋಕನ ಅಪೇಕ್ಷಣೀಯ. ಲೋಕಹಿತದಲ್ಲಿ ತನ್ನೊಳಿತ ಕಾಣುವ ತುಡಿತವು ನಮ್ಮೆಲ್ಲರಲ್ಲಿ ಉದಯವಾಗಲಿ ಎಂದು ಆಶಿಸೋಣ. ಅದನ್ನು ಎರಡು ಪ್ರಮುಖ ಆಯಾಮಗಳಲ್ಲಿ ನಿರೀಕ್ಷಿಸಿದರೆ ಸೂಕ್ತವಾದೀತು. ಒಂದು, ಪ್ರಭುತ್ವದ ಕರ್ತವ್ಯ; ಇನ್ನೊಂದು, ಪ್ರಜೆಗಳ ಹೊಣೆಗಾರಿಕೆ.

ಬದುಕು ಕಾಯುವ ಜೀವಪರಿಸರ ಉಳಿಸಿಕೊಳ್ಳುವತ್ತ ಸರ್ಕಾರದ ಜವಾಬ್ದಾರಿ ಬಹಳಷ್ಟಿದೆ. ನಮ್ಮ ನೆಲ–ಜಲ, ಕಾಡು–ಗೋಮಾಳ ಸೇರಿದಂತೆ ನೈಸರ್ಗಿಕ ಪರಿಸರವನ್ನೆಲ್ಲ ಜನಸಹಭಾಗಿತ್ವದೊಂದಿಗೆ ಕಾಪಾಡಿಕೊಳ್ಳಲು, ಸಾಕಷ್ಟು ಸರ್ಕಾರಿ ನೀತಿ ಹಾಗೂ ಕಾನೂನುಗಳು ಈಗಾಗಲೇ ಇವೆ. ಅವುಗಳ ಪರಿಣಾಮಕಾರಿ ಅನುಷ್ಠಾನ ಮಾತ್ರ ಬಾಕಿಯಿದೆ. ಕಾಡುಕಡಿತ, ನದಿಪಾತ್ರದ ಮಾಲಿನ್ಯ, ಗೋಮಾಳದ ಒತ್ತುವರಿ, ಕೆರೆಯಂಗಳದ ಅತಿಕ್ರಮಣ, ಕೃಷಿಭೂಮಿಯಲ್ಲಿ ಎಗ್ಗಿಲ್ಲದೆ ಸುರಿಯುತ್ತಿರುವ ಕ್ರಿಮಿನಾಶಕಗಳ ರಾಶಿ..., ಈ ಒಂದೊಂದನ್ನೂ ಈಗಿರುವ ಕಾನೂನುಗಳ ಸೂಕ್ತ ಜಾರಿಯಿಂದಲೇ ನಿಯಂತ್ರಿಸಬಹುದು. ಆಡಳಿತ ವ್ಯವಸ್ಥೆ ಎಚ್ಚೆತ್ತು, ಈಗಲಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಲೆಂಬುದು ಎಲ್ಲರ ಒತ್ತಾಸೆ.

ಈ ಸವಾಲು ನಿರ್ವಹಣೆಯಲ್ಲಿ ಪ್ರಜೆಗಳೆಂಬ ನಮ್ಮ ಹೊಣೆಗಾರಿಕೆಯೂ ಇದೆ. ಬೀದಿಗೆ ಪ್ಲಾಸ್ಟಿಕ್ ಕಸ ಬಿಸಾಡದಂತೆ, ನೀರು–ಅನ್ನ ವೃಥಾ ಚೆಲ್ಲದಂತೆ, ಊರುಕೇರಿಯ ಬಾವಿ–ಹೊಳೆಗಳಿಗೆ ಕೊಳಚೆ ಬಿಡದಂತೆ, ಬೇಸಾಯದಲ್ಲಿ ಕೊಳವೆಬಾವಿ ನೀರು ಹಾಗೂ ಕ್ರಿಮಿನಾಶಕ ಅತಿಯಾಗಿ ಬಳಸದಂತೆ ಪ್ರಯತ್ನಿಸಲು ನಮಗೆ ಸಾಧ್ಯವಾಗದೇನು? ಹಳ್ಳಿ–ಪಟ್ಟಣಗಳ ಒಬ್ಬೊಬ್ಬರೂ ಈ ಬಗೆಯ ಬದಲಾವಣೆಯ ಹರಿಕಾರರಾಗಬೇಕೆಂಬುದು ಈ ಕಾಲದ ಕರೆ. ರೈತರು, ಉದ್ಯೋಗಿಗಳು, ಉದ್ಯಮಿಗಳು – ಎಲ್ಲರೂ ಅವರವರ ವೃತ್ತಿಧರ್ಮದ ಜೊತೆ ನಿತ್ಯದ ಬದುಕಲ್ಲಿ ನಿಸರ್ಗದ ನಿಯಮಗಳನ್ನೂ ಪುರಸ್ಕರಿಸಬೇಕಿದೆ. ಹೊಸವರ್ಷವು ನಮಗೆ ಆ ಬಗೆಯ ಬದ್ಧತೆಯ ಬದುಕು ರೂಢಿಸಲೆಂದು ಆಶಿಸೋಣ.

ಪಂಚಾಯತ್ ಹಾಗೂ ನಗರಸಭೆಗಳಂಥ ಸ್ಥಳೀಯ ಆಡಳಿತಗಳು, ಸರ್ಕಾರ ಹಾಗೂ ಜನತೆ ಒಟ್ಟಾಗಿ ಕೆಲಸಮಾಡುವ ಪ್ರತ್ಯಕ್ಷ ಆಡಳಿತಯಂತ್ರಗಳು. ಪೂಜಾಸ್ಥಳಗಳಲ್ಲಿ ಜೊತೆಯಾಗಿ ಪೂಜಿಸುವಂತೆ, ಅಲ್ಲೂ ಪ್ರಭುತ್ವ ಹಾಗೂ ಪ್ರಜೆಗಳು ಒಂದಾಗಿ ಶ್ರಮಿಸಬೇಕಿದೆ. ಅಂಥ ಕರ್ತವ್ಯನಿರ್ವಹಣೆಯೇ ಇಂದು ನಾವು ಕೈಗೊಳ್ಳಬೇಕಾದ 'ಪ್ರಕೃತಿಪೂಜೆ'! ಪ್ರಕೃತಿ ವಿಕೋಪಗಳನ್ನೆಲ್ಲ ಮೀರಿ ಬದುಕು ಕಟ್ಟಿಕೊಳ್ಳಲು ನಾವು ತೋರಬೇಕಾದ ಬದ್ಧತೆ ಅದು. ಲೋಕಹಿತದ ಕನ್ನಡಿಯಲ್ಲಿ ನಾವು ಕಾಣುವುದು ನಮ್ಮ ಒಳಿತಿನ ಪ್ರತಿಬಿಂಬವೇ ತಾನೇ? ■



ಅಂತರರಾಷ್ಟ್ರೀಯ ಸರಕುಗಳ ಬೆಲೆ ಒತ್ತಡದಲ್ಲಿದೆ. ಚೀನಾದಲ್ಲಿ ಹೆಚ್ಚುತ್ತಿರುವ ಕೊರೊನಾ ವೈರಸ್ ಹಾವಳಿಯಿಂದ ವಸ್ತು ಪೂರೈಕೆ ಸರಪಳಿಗಳು (supply chain) ತೊಂದರೆಗೊಳಗಾಗಬಹುದು. ಇದರಿಂದ ಪ್ರಪಂಚದಾದ್ಯಂತ ಸರಕುಗಳ ವಿತರಣೆಗೆ ಅಡ್ಡಿಯಾಗಿ, ವಸ್ತುಗಳ ಬೆಲೆ ಗಗನಕ್ಕೇರಬಹುದು.

ಯುದ್ಧ ಹಾಗೂ ಸಾಂಕ್ರಾಮಿಕ ರೋಗಗಳ ಕಾರಣಗಳಿಂದ ಜಾಗತಿಕ ಉತ್ಪಾದನೆಯು (global output) ಸುಮಾರು ಶೇ. 16–17ರಷ್ಟು ಮಾತ್ರ ಬೆಳೆಯಲಿದೆ ಎಂದು ಅಂದಾಜಿಸಲಾಗಿದೆ. ಇದರಿಂದ ದೇಶೀಯ ಉತ್ಪನ್ನಗಳ (GDP) ಮೇಲೆ ಋಣಾತ್ಮಕ ಪ್ರಭಾವವಾಗಿ, ಜಗತ್ತಿಗೆ ಸುಮಾರು 17 ಟ್ರಿಲಿಯನ್ ಡಾಲರ್ ನಷ್ಟವಾಗಬಹುದು. ಇದು ವಿಶ್ವದ ಆದಾಯದ ಸುಮಾರು ಶೇ. 20 ಆಗಿದೆ.

2023ಲ್ಲಿ ಭಾರತ ಸುಮಾರು ಶೇ. 7ರಿಂದ 8ರಷ್ಟು ಉತ್ಪಾದನೆಯ ನಷ್ಟ ಅನುಭವಿಸುವ ಅಂದಾಜಿದೆ. ಸಾಲದ ಮೇಲಿನ ಬಡ್ಡಿದರಗಳ ಹೆಚ್ಚಳ, ರೂಪಾಯಿ ದುರ್ಬಲಗೊಳ್ಳುವಿಕೆ, ಅತಿಯಾದ ಸಾರ್ವಜನಿಕ ಸಾಲ (public debt), ಇಂಧನಗಳ ಬೆಲೆಯಲ್ಲಿ ಅಪಾರ ಹೆಚ್ಚಳ... ಇವೆಲ್ಲಾ ಭಾರತದಲ್ಲಿ ಆರ್ಥಿಕ ಅನಿಶ್ಚಿತತೆ ಸೃಷ್ಟಿಸಬಹುದು. ಇದಕ್ಕೆ ಪ್ರೇರಕವಾಗಿ ಅಸಾಮಾನ್ಯ ಹವಾಮಾನ ಪರಿಸ್ಥಿತಿಗಳು ಕೃಷಿ ಉತ್ಪಾದನೆ ಮೇಲೆ ಪರಿಣಾಮ ಬೀರಬಹುದು. ಹವಾಮಾನ ವೈಪರೀತ್ಯಗಳ ಆವರ್ತನ ಹೆಚ್ಚಿನ ಸಮಸ್ಯೆಗಳನ್ನು ಸೃಷ್ಟಿಸಬಹುದು.

ಫೆಬ್ರುವರಿ 2023ರ ಕೇಂದ್ರ ಬಜೆಟ್ ಸಾರ್ವತ್ರಿಕ ಚುನಾವಣೆಯ ಮುಂಚಿನ ಕೊನೆಯ ಬಜೆಟ್ ಆಗಿರುತ್ತದೆ. ಮತದಾರರ ಮನವೊಲಿಸಲು ಅನೇಕ ಕಲ್ಯಾಣ ಯೋಜನೆಗಳನ್ನು ಸರ್ಕಾರ ಘೋಷಿಸಬಹುದು. ಇದರಿಂದ ಆರ್ಥಿಕತೆಯು ಇನ್ನಷ್ಟು ಹದಗೆಡುವ ಸೂಚನೆಯಿದೆ.

ಜಾಗತಿಕ ಆರ್ಥಿಕ ಸ್ಥಿತಿ ಹೀಗಿರುವಾಗ ಸಾಮಾನ್ಯ ಪ್ರಜೆ ಏನು ಮಾಡಬಹುದು? ಈ ಮೇಲೆ ನಮೂದಿಸಿದ ಎಲ್ಲಾ ಅಂಕಿ ಅಂಶಗಳನ್ನು ತುಲನೆ ಮಾಡಿ, ಇದು ನಮ್ಮ ಆರ್ಥಿಕ ಪರಿಸ್ಥಿತಿ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಮುಖ್ಯವಾಗಿ, ಆಸ್ತಿ ಹಂಚಿಕೆಯನ್ನು (asset allocation) ಬುದ್ಧಿವಂತಿಕೆಯಿಂದ ಯೋಚಿಸಿ ಯೋಜಿಸಬೇಕು. ಪ್ರತಿ ತಿಂಗಳು ಉಳಿತಾಯ ಮಾಡಿದ ಹಣವನ್ನು ವಿವಿಧ ಆಸ್ತಿವರ್ಗಗಳಲ್ಲಿ (asset classes) ಹೂಡಬೇಕು. 'ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿಡಬಾರದು' ಎಂಬುದು ಪ್ರಸ್ತುತ ಸಲಹೆ.

'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎಂಬ ಚಾರ್ವಾಕ ಸಿದ್ಧಾಂತವನ್ನು ವೇದಾಂತವೆಂದು ನಂಬಬಾರದು. 'ಯಾರು ಸಾಲಗಾರರಲ್ಲವೋ ಅವರೇ ಶ್ರೀಮಂತರು' ಎಂಬುದು ರಷ್ಯಾದ ಗಾದೆಮಾತು. ಹಣ ಗಳಿಕೆಗೆಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಅದರ ಉಳಿತಾಯಕ್ಕೂ ಇದೆ. ಆದಾಯ ಎಷ್ಟೇ ಇರಲಿ, ಇದ್ದುದರಲ್ಲೇ ಸ್ವಲ್ಪ ಉಳಿತಾಯ ಮಾಡುವುದು ಅಗತ್ಯ. ಊಟ ಮಾಡುವಾಗ ಹೊಟ್ಟೆಯನ್ನು ಕಾಲುಭಾಗ ಖಾಲಿ ಇಟ್ಟರೆ ಸೇವಿಸಿದ ಆಹಾರ ಸರಿಯಾಗಿ ಜೀರ್ಣವಾಗುತ್ತದೆ ಎಂಬುದು ಆರೋಗ್ಯತಜ್ಞರ ಅಭಿಮತ. ಅಂತೆಯೇ ಗಳಿಸಿದ ಆದಾಯದಲ್ಲಿ ಕಾಲು ಭಾಗದಷ್ಟಾದರೂ ಉಳಿಸಿದರೆ ಬಾಳಿನ ಪಯಣ ಸುರಕ್ಷಿತವಾಗಿ ಸಾಗುತ್ತದೆ.

ಸುಖಕರ ಬದುಕಿಗೆ ಎಷ್ಟು ದುಡ್ಡು ಬೇಕು ಎಂಬುದನ್ನು ನಿರ್ದಿಷ್ಟವಾಗಿ ನಿರ್ಣಯಿಸಲು ಸಾಧ್ಯವಿಲ್ಲ. ಜೀವನಶೈಲಿ, ಆಸಕ್ತಿ–ಹವ್ಯಾಸ, ಆರೋಗ್ಯ ಸ್ಥಿತಿ, ಮದುವೆ–ಮಕ್ಕಳು ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಏನೇ ಇದ್ದರೂ ಹಣ ಗಳಿಸಿ, ಹಣ ಉಳಿಸಿ, ಹಣ ಬೆಳೆಸುವುದು ಭದ್ರವಾದ ಭವಿಷ್ಯಕ್ಕೆ ಬಲವಾದ ಬುನಾದಿ. ■